ನಿಮ್ಮನ್ನು ನೀವು ಸ್ವತಂತ್ರ ಪುರುಷ, ಸ್ವತಂತ್ರ ಮಹಿಳೆ ಎಂದೇ ತಿಳಿಯಿರಿ!'

ಮರುಗಳಿಗೆಯೇ ಗಾಂಧೀಜಿಯ ಪ್ರಖ್ಯಾತ ಕರೆ ಮೊಳಗಿತು: 'ಇಗೋ ಇಲ್ಲಿದೆ ನಾನು ನಿಮಗೆ ಕೊಡಲಿರುವ ಪುಟ್ಟ ಮಂತ್ರ. ಇದನ್ನು ನೀವು ನಿಮ್ಮ ಎದೆಯಲ್ಲಿ ಅಚ್ಚೊತ್ತಿಕೊಳ್ಳಿ; ನಿಮ್ಮ ಪ್ರತಿ ಉಸಿರಲ್ಲೂ ಈ ಮಂತ್ರ ಮೊಳಗಲಿ: 'ಡೂ ಆರ್ ಡೈ!' ಇದೇ ಆ ಮಂತ್ರ. ನಾವು ಇಂಡಿಯಾವನ್ನು ಸ್ವತಂತ್ರಗೊಳಿಸುತ್ತೇವೆ, ಇಲ್ಲಾ ಈ ಪ್ರಯತ್ನದಲ್ಲಿ ಸಾವನ್ನಪ್ಪುತ್ತೇವೆ. ಆದರೆ ಗುಲಾಮಗಿರಿ ಮುಂದುವರಿಯುವುದನ್ನು ನೋಡುತ್ತಾ ಬದುಕಿರುವುದಿಲ್ಲ.'

'ಡೂ ಆರ್ ಡೈ' ಕರೆಯ ಕೊನೆಗೆ ಗಾಂಧೀಜಿ ಹೇಳಿದರು: 'ನಮ್ಮ ಜನರಲ್ಲಿ ಜೀವದ ಸ್ಪರ್ಶವೇ ಉಳಿದಿಲ್ಲ. ಅವರ ಕಣ್ಣುಗಳಲ್ಲಿ ಹೊಳಪು ಬರಬೇಕೆಂದಾದರೆ ಸ್ವಾತಂತ್ರ್ಯ ಇವತ್ತೇ ಬರಬೇಕು; ನಾಳೆಯಲ್ಲ. ಆದ್ದರಿಂದಲೇ ನಾನು ಕಾಂಗ್ರೆಸ್ಸನ್ನು ಈ ಕಾರ್ಯಕ್ಕೆ ಮುಡಿಪಾಗಿಟ್ಟಿರುವೆ; ಕಾಂಗ್ರೆಸ್ ಡೂ ಆರ್ ಡೈ ಪ್ರತಿಜ್ಞೆಯನ್ನು ಸ್ವೀಕರಿಸುತ್ತಿದೆ.'

ಗ್ವಾಲಿಯರ್ ಕೆರೆ ಮೈದಾನದಲ್ಲಿ ಗಾಂಧೀಜಿಯ ಭಾಷಣ ಕೇಳುತ್ತಿದ್ದ ಬೃಹತ್ ಜನಸಮೂಹ 'ಡೂ ಆರ್ ಡೈ' ಕರೆ ಕೇಳಿ ಹುಚ್ಚೆದ್ದಿತು. ಆ ಕಾಂಗ್ರೆಸ್ ಸಭೆಯಲ್ಲಿ ಕೂತು ಗಾಂಧೀಜಿಯವರ ಕರೆಯನ್ನು ಕೇಳಿಸಿಕೊಳ್ಳುತ್ತಿದ್ದವರಲ್ಲಿ ತರುಣ ಲೋಹಿಯಾ ಕೂಡ ಇದ್ದರು.

ಅವತ್ತು ಗಾಂಧೀಜಿ ಹಿಂದಿ ಭಾಷೆಯಲ್ಲಿ ಕನ್ನಡನಾಡಿಗೂ ಒಂದು ಸಂದೇಶ ಕಳಿಸಿದರು: 'ಮೈಸೂರು ರಾಜ್ಯದ ಜನರು ಈ ಯಜ್ಞದಲ್ಲಿ ಭಾಗಿಯಾಗುತ್ತಾರೆಂಬ ನಂಬಿಕೆ ನನಗಿದೆ.'

'ಡೂ ಆರ್ ಡೈ' ಕನ್ನಡನಾಡಿನ ಸ್ವಾತಂತ್ರ್ಯಯೋಧರ ನುಡಿಯಲ್ಲಿ 'ಮಾಡು ಇಲ್ಲವೆ ಮಡಿ' ಆಯಿತು!

ದೇಶದುದ್ದಕ್ಕೂ ಮಿಂಚಿನ ಸಂಚಾರವಾಗಿತ್ತು. ಮಾರನೆಯ ಬೆಳಗಿಗೇ ಗಾಂಧೀಜಿಯ ಬಂಧನವಾಯಿತು. ನೆಹರು, ಪಟೇಲ್, ಮೌಲಾನ ಸೇರಿದಂತೆ ರಾಷ್ಟ್ರಾದ್ಯಂತ ಹಿರಿಯ, ಕಿರಿಯ ಚಳುವಳಿಯ ನಾಯಕರೆಲ್ಲ ಬಂಧನಕ್ಕೊಳಗಾದರು. ದೇಶದ ದೊಡ್ಡ ದೊಡ್ಡ ನಾಯಕರು ಜೈಲು ಸೇರಿದ್ದರು.

ಮುಂಬೈ ಅಧಿವೇಶನಕ್ಕೆ ಬಂದಿದ್ದ ಸಮಾಜವಾದಿಗಳು ಇದಕ್ಕಿಂತ ಮೊದಲೇ, 'ಸುಮ್ಮನೆ ಬಂಧನಕ್ಕೊಳಗಾಗಬಾರದು; ಭೂಗತ ಹೋರಾಟ ಕಟ್ಟಬೇಕು; ಸ್ವಾತಂತ್ರ್ಯ ಚಳುವಳಿಯನ್ನು ಮುಂದುವರಿಸಬೇಕು' ಎಂದು ತೀರ್ಮಾನಿಸಿದ್ದರು.

9 ಆಗಸ್ಟ್ 1942. ಜನತಾ ಕ್ರಾಂತಿಯ ಸ್ಫೋಟವಾಗಿತ್ತು. ನಾಯಕರ ಬಂಧನದಿಂದ ಸಿಡಿದೆದ್ದ ದೇಶದ ಜನ ತಂತಾವೇ ನಾಯಕರಾದರು. ತಮತಮಗೆ ತೋಚಿದಂತೆ 'ಮಾಡು ಇಲ್ಲವೇ ಮಡಿ' ಕರೆಯನ್ನು ಜಾರಿಗೊಳಿಸತೊಡಗಿದರು. ಆ ರಾತ್ರಿ ಲೋಹಿಯಾ ಹಾಗೂ ಅವರ ಸಂಗಾತಿಗಳಾದ ಅಚ್ಯುತ್ ಪಟವರ್ಧನ್, ಮಧು ಲಿಮಯೆ ಭೂಗತರಾದರು. ನಂತರದ ದಿನಗಳಲ್ಲಿ ಅರುಣಾ ಅಸಫ್ ಆಲಿ, ಸುಚೇತಾ ಕೃಪಲಾನಿ ಮೊದಲಾದವರು ಭೂಗತರಾದರು. ಆಗಸ್ಟ್ 9ರ ಕ್ರಾಂತಿಯ ಕಿಡಿ ಆರದಂತೆ ಕಾಪಾಡುತ್ತಾ, ಜನತೆಗೆ ಹೋರಾಟದ ದಾರಿ ತೋರಿಸುವ ಹೊಣೆ ಹೊತ್ತು ಮುಂಬೈ, ದಿಲ್ಲಿ, ಕಲ್ಕತ್ತಾ, ನೇಪಾಳ... ಮುಂತಾದೆಡೆ ಚದುರಿ ಹೋದರು. ಯೂಸುಫ್ ಮೆಹರಾಲಿ, ಅಶೋಕ ಮೆಹ್ತಾ ಬಂಧನಕ್ಕೊಳಗಾಗಿದ್ದರು. ಜೆ.ಪಿ. ಈ ಮೊದಲೇ ಜೈಲಿನಲ್ಲಿದ್ದರು.

## ಕಳೆದ ಸಂಚಿಕೆಯಲ್ಲಿ



ಪಿಎಚ್‌ಡಿ. ಮೌಖಿಕ ಪರೀಕ್ಷೆಯಲ್ಲಿ ಲೋಹಿಯಾ ಹಾಗೂ ಪ್ರೊ. ಶೂಮಾಕರ್ ಮುಖಾಮುಖಿಯಾಯಿತು. 'ಹಿಟ್ಲರ್ ಸರ್ವಾಧಿಕಾರದ ಕೆಟ್ಟ ದಿನಗಳು ಬರಲಿವೆ. ಆದಷ್ಟು ಬೇಗ ಜರ್ಮನಿಯಿಂದ ಹೊರಡಿ' ಎಂದು ಶೂಮಾಕರ್ ಲೋಹಿಯಾರನ್ನು ಎಚ್ಚರಿಸಿದರು. ಮದ್ರಾಸ್ ಬಂದರಿಗೆ ಬಂದಿಳಿದಾಗ ಅವರು ಅಕ್ಷರಶಃ ಬರಿಗೈಯಲ್ಲಿದ್ದರು. ಭಾರತಕ್ಕೆ ಬಂದವರೇ ಹಿಟ್ಲರ್ ಸರ್ವಾಧಿಕಾರ ಎಷ್ಟು ಕಾಲ ಉಳಿಯಬಹುದೆಂದು ಪತ್ರಿಕೆಗೆ ಲೇಖನ ಬರೆದರು. ಯಾವ ಕೆಲಸವೂ ಒಗ್ಗದೆ ಪೂರ್ಣ ಪ್ರಮಾಣದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಇಳಿದರು. 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯ ಸಂಪಾದಕತ್ವ ಅವರ ಪಾಲಿಗೆ ಬಂತು. ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಪತ್ರಿಕೆಯಲ್ಲಿ ವಿಮರ್ಶೆ ಬರೆದು, ಗಾಂಧೀಜಿಯನ್ನು ರೇಗಿಸಿದ್ದೂ ಆಯಿತು. ನಂತರದ ದಿನಗಳಲ್ಲಿ ಲೋಹಿಯಾರ ಪ್ರಖರ ವ್ಯಕ್ತಿತ್ವ ಗಾಂಧಿ ಹಾಗೂ ನೆಹರೂ ಗಮನಸೆಳೆಯಿತು. ಎರಡನೇ ಮಹಾಯುದ್ಧ ಆರಂಭಗೊಂಡಾಗ, ಭಾರತ ಬ್ರಿಟನ್ ಹಾಗೂ ಹಿಟ್ಲರ್‌ನನ್ನು ವಿರೋಧಿಸಬೇಕೆಂದು ಲೋಹಿಯಾ ಸ್ಪಷ್ಟವಾಗಿ ಹೇಳಿದರು.

ಸಿಟ್ಟಿಗೆದ್ದ ಜನ ಪೊಲೀಸ್ ಠಾಣೆಗಳು, ಅಂಚೆ ಕಚೇರಿಗಳು, ಟೆಲಿಫೋನ್ ವೈರುಗಳು, ರೈಲ್ವೆ ಹಳಿಗಳು... ಮುಂತಾಗಿ ಸರ್ಕಾರಿ ಆಸ್ತಿಯನ್ನು ಧ್ವಂಸ ಮಾಡತೊಡಗಿದರು. ಬ್ರಿಟಿಷ್ ಸಾಮ್ರಾಜ್ಯದ ಸಂಕೇತವಾದ ಯೂನಿಯನ್ ಜಾಕ್ ಧ್ವಜ ಎಲ್ಲಿ ಕಾಣುತ್ತದೋ ಆ ಕಟ್ಟಡಗಳನ್ನೆಲ್ಲ ಧ್ವಂಸಗೊಳಿಸುತ್ತಿದ್ದರು; 'ಬ್ರಿಟಿಷ್ ಸಂಕೇತಗಳನ್ನು ನಾಶ ಮಾಡಬೇಕು; ಆದರೆ ಯಾರನ್ನೂ ಹಿಂಸಿಸಬಾರದು' ಎಂದು ಲೋಹಿಯಾ ಜನರನ್ನು ಎಚ್ಚರಿಸುತ್ತಿದ್ದರು.

ಹಿರಿಯ ನಾಯಕರಿಲ್ಲದ ಸ್ವಾತಂತ್ರ್ಯ ಚಳುವಳಿಯನ್ನು ಬಗ್ಗು ಬಡಿಯುವುದು ಸುಲಭ ಎಂದು ಬ್ರಿಟಿಷ್ ಆಡಳಿತ ಭಾರತೀಯ ಪೊಲೀಸರನ್ನು ಭಾರತೀಯರ ಮೇಲೆ ಛೂಬಿಟ್ಟಿತ್ತು. ಆದರೆ ಸ್ಥಳೀಯ ಚಳುವಳಿಗಾರರ ಬಂಧನಗಳಾದ ಸ್ಥಳಗಳಲ್ಲೆಲ್ಲ ಜನ ತಮ್ಮ ಉಗ್ರ ಪ್ರತಿರೋಧ ವ್ಯಕ್ತಪಡಿಸತೊಡಗಿದರು.

19 ಅಥವಾ 20 ಆಗಸ್ಟ್ 1942. ಭೂಗತ ನಾಯಕರ ಮೊದಲ ಭೇಟಿಯಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಪೂರ್ಣಿಮಾ ಬ್ಯಾನರ್ಜಿ, ರಮಾನಂದನ ಮಿಶ್ರ, ಕೆ.ಡಿ. ಮಾಳವೀಯ, ಎಸ್. ಎಂ. ಜೋಶಿ ಸೇರಿದ್ದರು. ಭೂಗತ ಕಚೇರಿ ಶುರುವಾದ ಮೇಲೆ, ಲೋಹಿಯಾ, ಸುಚೇತಾ ಕೃಪಲಾನಿ, ಅಚ್ಯುತ್ ಪಟವರ್ಧನ್ ವ್ಯವಸ್ಥಿತ ಹೋರಾಟ, ಪ್ರಕಟಣೆಗಳನ್ನು ಶುರು ಮಾಡಿದರು.

ಸ್ವಾತಂತ್ರ್ಯ ಚಳುವಳಿಯನ್ನು ಜೀವಂತವಾಗಿಡುವ, ಚಳುವಳಿಗೆ ದಿಕ್ಕು ತೋರಿಸುವ ದನಿಗಳು ಸ್ಫೋಟದ ಹಲವು ಮಾದರಿಗಳನ್ನು ಹುಡುಕಿಕೊಂಡವು. ಅವುಗಳಿಗೆ ಭೂಗತ ಹೋರಾಟಗಾರರು ಖಚಿತ ದಿಕ್ಕು ಕೊಡತೊಡಗಿದರು. 'ಬ್ರಿಟಿಷ್ ಸಂಸ್ಥೆಗಳ ಮೇಲೆ ದಾಳಿ ಮಾಡಿದರೆ ಬ್ರಿಟಿಷ್ ಸರ್ಕಾರ ಹಿಮ್ಮೆಟ್ಟುತ್ತದೆ' ಎಂದು ಲೋಹಿಯಾ ಹೇಳುತ್ತಿದ್ದರು. ಬ್ರಿಟಿಷ್ ಸರ್ಕಾರದ ವರದಿಯ ಪ್ರಕಾರವೇ 15 ಸೆಪ್ಟೆಂಬರ್ 1942ರ ಹೊತ್ತಿಗೆ 550ಕ್ಕೂ ಹೆಚ್ಚು ಅಂಚೆ ಕಚೇರಿಗಳು ನಾಶವಾದವು. 3500 ಟೆಲಿಫೋನ್, ಟೆಲಿಗ್ರಾಫ್ ವೈರ್ ಕತ್ತರಿಸಿದ ಪ್ರಕರಣಗಳಾದವು.

ಲೋಹಿಯಾ ಮಾರ್ಗದರ್ಶನದಲ್ಲಿ 'ಕರೇಂಗೆ ಯಾ ಮರೇಂಗೆ' ಹಿಂದಿ ಭೂಗತ ಪತ್ರಿಕೆ ಹೊರ ಬರತೊಡಗಿತು; ಲೋಹಿಯಾ ಬರೆದ 'ಫೈಟರ್ಸ್! ಮಾರ್ಚ್ ಫಾರ್ವರ್ಡ್!' (ಹೋರಾಟಗಾರರೇ! ಮುನ್ನಡೆಯಿರಿ!) ಕಿರುಹೊತ್ತಿಗೆ ಜನರ ಕೈಪಿಡಿಯಾಯಿತು.

ಭೂಗತ ಸ್ವಾತಂತ್ರ್ಯ ಚಳುವಳಿಗೆ ದೇಶಾದ್ಯಂತ ಮಾರ್ಗದರ್ಶನ ಮಾಡಲು ಆಗಸ್ಟ್ 27, 1942ರ ರಾತ್ರಿ ಇದ್ದಕ್ಕಿದ್ದಂತೆ ಬಾನುಲಿಯಲ್ಲಿ ಒಂದು ಹೆಣ್ಣು ದನಿ ಮೊಳಗಿತು:

'ಇದು ಕಾಂಗ್ರೆಸ್ ರೇಡಿಯೊ! ತರಂಗಾಂತರ 41.78 ಮೀಟರ್ಸ್.'

3 ಸೆಪ್ಟೆಂಬರ್ 1942: 'ಈಗ ಬಾಂಬೇ ಬುಲೆಟಿನ್' ಎಂದ ಹೆಣ್ಣು ದನಿ, 'ಕಾಂಗ್ರೆಸ್ ರೇಡಿಯೊ ಪ್ರಸಾರವಾಗಲಿದೆ, ತರಂಗಾಂತರ 42.34 ಮೀಟರ್ಸ್ ಎಂದು ಘೋಷಿಸಿತು. ಸುದ್ದಿ ಪ್ರಸಾರದ ಶುರುವಿಗೆ ಕವಿ ಮಹ್ಮದ್ ಇಕ್ಬಾಲ್ ಅವರ ದೇಶಭಕ್ತಿ ಗೀತೆ 'ಸಾರೇ ಜಹಾಂಸೆ ಅಚ್ಛಾ